ಸಂಕೇತ ಸಂಖ್ಯೆ : **85-K**
**Code No. : 85-K**

**CCE RR**

# ವಿಷಯ : ಸಮಾಜ ವಿಜ್ಞಾನ
# Subject : SOCIAL SCIENCE

**( ಕನ್ನಡ ಭಾಷಾಂತರ / Kannada Version )**
**( ಹೊಸ ಪಠ್ಯಕ್ರಮ / New Syllabus )**
**( ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater )**

***ಸಾಮಾನ್ಯ ಸೂಚನೆಗಳು :***

i) ಈ ಪ್ರಶ್ನೋತ್ತರ ಕಿರುಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 47 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಯ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಗಳ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಸೀಸದ ಕಡ್ಡಿ (ಪೆನ್ಸಿಲ್) ಯಿಂದ ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು–ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

viii) ನಿಮ್ಮ ಪ್ರಶ್ನೋತ್ತರ ಕಿರುಪುಸ್ತಕದ ಬಲಭಾಗದಲ್ಲಿರುವ ಗೆರೆಯ ಪಕ್ಕದ ಖಾಲಿ ಜಾಗದಲ್ಲಿ ಯಾವುದೇ ರೀತಿಯ ಬರಹಗಳನ್ನು ಬರೆಯಬಾರದು.

I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $10 \times 1 = 10$

1. ರಷ್ಯಾ ದೇಶದಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೊಳಿಸಿದವರು

(A) ಲೆನಿನ್ (B) ಸ್ಟಾಲಿನ್

(C) ಹಿಟ್ಲರ್ (D) ಮುಸೋಲಿನಿ

2. **A ಪಟ್ಟಿ**ಯಲ್ಲಿ ನಾಯಕರು ಮತ್ತು **B ಪಟ್ಟಿ**ಯಲ್ಲಿ ಅವರ ಕಾರ್ಯಗಳನ್ನು ಸೂಚಿಸಲಾಗಿದೆ. ಅವುಗಳಿಗೆ ಸರಿ ಹೊಂದುವ ಉತ್ತರದ ಗುಂಪನ್ನು ಗುರುತಿಸಿ :

| ***A ಪಟ್ಟಿ*** | | ***B ಪಟ್ಟಿ*** | |
|---|---|---|---|
| (a) | ರಾಜಾ ರಾಮ್‌ಮೋಹನ್ ರಾಯ್ | (i) | ರಾಮಕೃಷ್ಣ ಮಿಷನ್ |
| (b) | ಸ್ವಾಮಿ ದಯಾನಂದ ಸರಸ್ವತಿ | (ii) | ಸತ್ಯಶೋಧಕ ಸಮಾಜ |
| (c) | ಸ್ವಾಮಿ ವಿವೇಕಾನಂದ | (iii) | ಬ್ರಹ್ಮ ಸಮಾಜ |
| (d) | ಮಹಾತ್ಮ ಜ್ಯೋತಿಭಾ ಪುಲೆ | (iv) | ಆರ್ಯ ಸಮಾಜ |

| | ***a*** | ***b*** | ***c*** | ***d*** |
|---|---|---|---|---|
| (A) | i | ii | iii | iv |
| (B) | ii | i | iv | iii |
| (C) | iv | iii | ii | i |
| (D) | iii | iv | i | ii |

3. ಭಾರತ–ಚೀನಾ ದೇಶಗಳ ಸಂಬಂಧವು ಈ ತತ್ತ್ವಗಳ ಮೇಲೆ ಅವಲಂಬಿತವಾಗಿದೆ

(A) ಕಮ್ಯುನಿಸ್ಟ್ ಮತ್ತು ಹಿಂದೂ ತತ್ತ್ವ

(B) ಆರ್ಥಿಕ ಮತ್ತು ರಾಜಕೀಯ ತತ್ತ್ವ

(C) ಪಂಚಶೀಲ ಮತ್ತು ಹಿಂದೂ–ಚೀನಿ ಭಾಯಿಭಾಯಿ ತತ್ತ್ವ

(D) ಪ್ರಜಾಪ್ರಭುತ್ವ ಮತ್ತು ಸಮಾನತೆಯ ತತ್ತ್ವ

4. ಭದ್ರತಾ ಸಮಿತಿಯ ಖಾಯಂ ಸದಸ್ಯ ರಾಷ್ಟ್ರಗಳು ಈ ಕೆಳಕಂಡಂತಿವೆ

(A) ಅಮೆರಿಕಾ, ಭಾರತ, ಪಾಕಿಸ್ತಾನ, ಶ್ರೀಲಂಕಾ ಮತ್ತು ಚೀನಾ

(B) ಅಮೆರಿಕಾ, ರಷ್ಯಾ, ಬ್ರಿಟನ್, ಫ್ರಾನ್ಸ್ ಮತ್ತು ಚೀನಾ

(C) ಅಮೆರಿಕಾ, ರಷ್ಯಾ, ನೇಪಾಳ, ಪಾಕಿಸ್ತಾನ ಮತ್ತು ಬಾಂಗ್ಲಾದೇಶ

(D) ಅಮೆರಿಕಾ, ಸ್ವಿಡ್ಜರ್‌ಲ್ಯಾಂಡ್, ಚೀನಾ, ನೇಪಾಳ ಮತ್ತು ಭಾರತ

5. ಸಂವಿಧಾನದ .......................... ವಿಧಿಯು ಅಸ್ಪೃಶ್ಯತಾ ಆಚರಣೆಯು ಒಂದು ಶಿಕ್ಷಾರ್ಹ ಅಪರಾಧ ಎಂದಿದೆ.

(A) 11ನೇಯ ವಿಧಿ (B) 17ನೇಯ ವಿಧಿ

(C) 13ನೇಯ ವಿಧಿ (D) 15ನೇಯ ವಿಧಿ

6. ಈ ನಕ್ಷೆಯಲ್ಲಿ ಗುರುತಿಸಿರುವ ಪ್ರದೇಶಗಳಲ್ಲಿ ಸರಿಯಾಗಿ ಹೊಂದಿಕೆಯಾಗುವುದನ್ನು ಗುರುತಿಸಿ




(A) 1 — ಕೋಸಿ, 2 — ಚಂಬಲ್, 3 — ಬಿಯಾಸ್

(B) 1 — ಚಂಬಲ್, 2 — ಹಿರಾಕುಡ್, 3 — ದಾಮೋದರ್

(C) 1 — ನಾಗಾರ್ಜುನ, 2 — ನರ್ಮದ, 3 — ಭಾಕ್ರಾ ನಂಗಲ್

(D) 1 — ಚಂಬಲ್, 2 — ಕೋಸಿ, 3 — ದಾಮೋದರ್

7. ನೈರುತ್ಯ ಮಾನ್ಸೂನ್ ಮಾರುತಗಳು ಭಾರತವನ್ನು ಎರಡು ಕವಲುಗಳಾಗಿ ಪ್ರವೇಶಿಸುತ್ತವೆ

   (A) ಅರಬ್ಬಿ ಸಮುದ್ರ ಶಾಖೆ ಮತ್ತು ಬಂಗಾಳಕೊಲ್ಲಿ ಶಾಖೆ

   (B) ಅಂಡಮಾನ್ ಶಾಖೆ ಮತ್ತು ನಿಕೋಬರ್ ಶಾಖೆ

   (C) ಪೂರ್ವ ಘಟ್ಟ ಶಾಖೆ ಮತ್ತು ಪಶ್ಚಿಮ ಘಟ್ಟ ಶಾಖೆ

   (D) ಉತ್ತರ ಭಾರತ ಶಾಖೆ ಮತ್ತು ದಕ್ಷಿಣ ಭಾರತ ಶಾಖೆ

8. ಸರ್ಕಾರದ ಒಂದು ವರ್ಷದ ಅಂದಾಜು ಆದಾಯ ಮತ್ತು ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪಟ್ಟಿಯು

   (A) ಸಾರ್ವಜನಿಕ ಹಣಕಾಸು (B) ಸಾರ್ವಜನಿಕ ವೆಚ್ಚಗಳು

   (C) ಯೋಜನಾ ವೆಚ್ಚಗಳು (D) ಆಯವ್ಯಯ

9. ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ...................... ಸಂಸ್ಥೆಯು ನೀಡುತ್ತದೆ.

   (A) ಕೇಂದ್ರ ಬ್ಯಾಂಕು (B) ಅಂಚೆ ಕಛೇರಿ

   (C) ಸಹಕಾರಿ ಬ್ಯಾಂಕ್ (D) ವಾಣಿಜ್ಯ ಬ್ಯಾಂಕ್

10. ಭಾರತದ ದೂರದರ್ಶನ ಕ್ಷೇತ್ರದ ರಾಣಿ ಎಂದು ಹೆಸರು ಪಡೆದವರು

   (A) ಕಿರಣ್ ಮುಜುಮ್‌ದಾರ್ ಷಾ (B) ಏಕ್ತಾ ಕಪೂರ್

   (C) ಅಜೀಮ್ ಪ್ರೇಮ್‌ಜಿ (D) ಪ್ರಮೀಳಾದೇವಿ

II. ಈ ಕೆಳಗಿನ ಪ್ರಶ್ನೆಗಳಿಗೆ ***ಒಂದೊಂದು*** ವಾಕ್ಯದಲ್ಲಿ ಉತ್ತರ ಬರೆಯಿರಿ : $14 \times 1 = 14$

11. ಭಾರತದ ಇತಿಹಾಸ ಹೆಚ್ಚು ಲಿಖಿತ ರೂಪದಲ್ಲಿಲ್ಲ, ಏಕೆ ?

12. ಭಾರತ ಸರ್ಕಾರದ (1935 ) ಕಾಯಿದೆ ಸ್ವಾತಂತ್ರ್ಯ ಭಾರತಕ್ಕೆ ಒಂದು ಪ್ರಮುಖ ದಾಖಲೆ ಆಗಿದೆ, ಏಕೆ ?

13. ದಯಾನಂದ ಸರಸ್ವತಿಯವರು ಭಾರತೀಯರಿಗೆ 'ವೇದಗಳಿಗೆ ಹಿಂದಿರುಗಿ' ಎಂದು ಕರೆ ನೀಡಲು, ಕಾರಣವೇನು ?

14. ಕೋಮುವಾದ ಎಂದರೇನು ?

15. ನಾವು ಯುನಿಸೆಫ್ ಶುಭಾಶಯ ಪತ್ರಗಳನ್ನು ಏಕೆ ಕೊಳ್ಳಬೇಕು ?

16. ಬಾಲಕಾರ್ಮಿಕ ವಿರೋಧಿ ಕಾಯ್ದೆ ಉಲ್ಲಂಘಿಸಿದ ಉದ್ಯೋಗಪತಿಗಳು ಕಡ್ಡಾಯವಾಗಿ ಭರಿಸಬೇಕಾದ್ದು ಏನು ?

17. ಗರ್ಭದಲ್ಲಿರುವ ಮಗುವಿನ ಲಿಂಗ ಕಂಡುಹಿಡಿಯುವಿಕೆ ಕಾನೂನು ಬಾಹಿರ, ಏಕೆ ?

18. ಮಿಶ್ರ ಬೇಸಾಯ ಎಂದರೇನು ?

19. ವಾಯುವ್ಯ ಭಾರತದಲ್ಲಿ ಗೋಧಿ ಅತಿ ಮುಖ್ಯ ಹಿಂಗಾರು ಬೆಳೆಯಾಗಿದೆ, ಏಕೆ ?

20. ಪೆಟ್ರೋಲಿಯಂ ದ್ರವರೂಪದ ಚಿನ್ನ ಎಂದು ಕರೆಯಲು ಕಾರಣವೇನು ?

21. ಕೈಗಾರಿಕಾ ವಲಯ ಎಂದರೇನು ?

22. ಮಹಿಳಾ ಸಬಲೀಕರಣದ ಅರ್ಥ ತಿಳಿಸಿ.

23. ತಲಾ ಆದಾಯವನ್ನು ಹೇಗೆ ಕಂಡುಹಿಡಿಯಲಾಗುತ್ತದೆ ?

24. ಬಿಳಿ ಕ್ರಾಂತಿಯ ಪಿತಾಮಹಾ ಎಂದು ಯಾರನ್ನು ಕರೆಯಲಾಗುತ್ತದೆ ?

III. ಈ ಕೆಳಗಿನ ಪ್ರಶ್ನೆಗಳಿಗೆ **ಎರಡರಿಂದ ನಾಲ್ಕು** ವಾಕ್ಯಗಳಲ್ಲಿ ಉತ್ತರಿಸಿ : 15 × 2 = 30

25. ಯೂರೋಪಿಯನ್ನರು ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡುಹಿಡಿಯಲು ಪ್ರೇರಣೆ ನೀಡಿದ ಅಂಶಗಳಾವುವು ?

**ಅಥವಾ**

ಪ್ಲಾಸಿ ಕದನದ ಪರಿಣಾಮಗಳೇನು ?

26. ಇಂಗ್ಲಿಷರು ಮದ್ರಾಸ್ ಒಪ್ಪಂದಕ್ಕೆ ಸಹಿ ಹಾಕುವುದು ಏಕೆ ಅನಿವಾರ್ಯವಾಯಿತು ?

27. ಹೈದರಾಬಾದ್ ಭಾರತದ ಒಕ್ಕೂಟದಲ್ಲಿ ವಿಲೀನವಾದ ಬಗೆ ಹೇಗೆ ?

28. ಎರಡನೇ ಮಹಾಯುದ್ಧದಿಂದಾದ ಪರಿಣಾಮಗಳಾವುವು ?

29. ಅನಕ್ಷರತೆಯನ್ನು ನಿವಾರಿಸಲು ಭಾರತ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು ?

30. ಭಯೋತ್ಪಾದನೆಯ ಪರಿಣಾಮಗಳೇನು ?

31. ಅಪ್ಪಿಕೊ ಚಳುವಳಿಯ ಉದ್ದೇಶಗಳೇನು ?

32. ಜನಸಂಖ್ಯಾ ಬೆಳವಣಿಗೆಯನ್ನು ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳಾವುವು ?

33. ಪರ್ಯಾಯ ಪ್ರಸ್ಥಭೂಮಿಯು ಆರ್ಥಿಕವಾಗಿ ಹೆಚ್ಚು ಪ್ರಾಮುಖ್ಯತೆ ಪಡೆದಿದೆ, ಏಕೆ ?

34. ಮಣ್ಣಿನ ಸವಕಳಿಗೆ ಕಾರಣಗಳೇನು ?

35. ಅರಣ್ಯಗಳ ಸಂರಕ್ಷಣೆಯ ವಿಧಾನಗಳನ್ನು ತಿಳಿಸಿ.

36. ಭೌಗೋಳಿಕ ಮಾಹಿತಿ ವ್ಯವಸೆಯನ್ನು ವಿಶ್ವವ್ಯಾಪಿ ಬಳಸಲಾಗುತ್ತಿದೆ. ಏಕೆ ?

37. ಭೂ ಕುಸಿತಕ್ಕೆ ಕಾರಣಗಳಾವುವು ?

38. ಪಂಚವಾರ್ಷಿಕ ಯೋಜನೆಗಳ ಉದ್ದೇಶಗಳೇನು ?

39. ಜಾಗತೀಕರಣವು ವಿಶ್ವದಾದ್ಯಂತ ಆರ್ಥಿಕ ಚಳುವಳಿಯಾಗಿದೆ. ಈ ಹೇಳಿಕೆಯನ್ನು ಸಮರ್ಥಿಸಿ.

IV. ಈ ಕೆಳಗಿನ ಪ್ರಶ್ನೆಗಳಿಗೆ ***ಆರರಿಂದ ಎಂಟು*** ವಾಕ್ಯಗಳಲ್ಲಿ ಉತ್ತರಿಸಿ : $6 \times 3 = 18$

40. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ರಾಜಕೀಯ ಮತ್ತು ಸೈನಿಕ ಅಂಶಗಳು ಹೇಗೆ ಪ್ರೇರಕವಾದವು ?

***ಅಥವಾ***

ಭಾರತದಲ್ಲಿ ನವ ಜಾಗೃತಿಯ ಉದಯಕ್ಕೆ ಶಿಕ್ಷಣವು ಹೇಗೆ ಪ್ರಮುಖ ಪಾತ್ರವಹಿಸಿತು ?

41. ಪಂಚಶೀಲ ತತ್ತ್ವಗಳಾವುವು ?

***ಅಥವಾ***

ಭಾರತ ಹಾಗೂ ರಷ್ಯಾದ ಸಂಬಂಧವನ್ನು ವಿವರಿಸಿ.

42. ಅಸ್ಪೃಶ್ಯತಾ ನಿವಾರಣೆಗೆ ತೆಗೆದುಕೊಂಡಿರುವ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳಾವುವು ? ವಿವರಿಸಿ.

***ಅಥವಾ***

ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ನಡುವಿನ ವ್ಯತ್ಯಾಸಗಳನ್ನು ವಿವರಿಸಿ.

43. ರಸ್ತೆ ಸಾರಿಗೆಯ ಪ್ರಮುಖ ಸಮಸ್ಯೆಗಳು ಯಾವುವು ?

***ಅಥವಾ***

ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳು ಯಾವುವು ?

44. ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರೀಕರಣದ ಹಿನ್ನಲೆಯಲ್ಲಿ ವಿವರಿಸಿ.

***ಅಥವಾ***

ವೈಯಕ್ತಿಕ ಹಣಕಾಸು ಮತ್ತು ಸಾರ್ವಜನಿಕ ಹಣಕಾಸುಗಳ ನಡುವಿನ ಭಿನ್ನತೆಗಳನ್ನು ವಿವರಿಸಿ.

45. ಬ್ಯಾಂಕಿನ ಕರ್ತವ್ಯಗಳನ್ನು ವಿವರಿಸಿ.

***ಅಥವಾ***

ಜೀವ ವಿಮೆ ಮತ್ತು ಸಾಮಾನ್ಯ ವಿಮೆ ನಡುವೆ ಇರುವ ವ್ಯತ್ಯಾಸಗಳಾವುವು ?

V. ಈ ಕೆಳಗಿನ ಪ್ರಶ್ನೆಗಳಿಗೆ ***ಎಂಟರಿಂದ ಹತ್ತು*** ವಾಕ್ಯಗಳಲ್ಲಿ ಉತ್ತರಿಸಿ : 4

46. ನೆಹರೂರವರು ಪ್ರಧಾನ ಮಂತ್ರಿಯಾದ ನಂತರ ರಾಷ್ಟ್ರಕ್ಕೆ ನೀಡಿದ ಪ್ರಮುಖ ಕೊಡುಗೆಗಳನ್ನು ವಿವರಿಸಿ.

VI. 47. ಭಾರತದ ನಕ್ಷೆಯನ್ನು ಬರೆದು, ಕೆಳಗಿನವುಗಳನ್ನು ಗುರುತಿಸಿ : 1 + 3 = 4

a) $82\frac{1}{2}^{\circ}$ ಪೂರ್ವ ರೇಖಾಂಶ

b) ದಾಮೋದರ್ ನದಿ ಕಣಿವೆ ಯೋಜನೆ

c) ಬಾಂಬೆ ಹೈ

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 47 ರ ಬದಲಿಗೆ)***

ಹಿಮಾಲಯ ಪರ್ವತದಿಂದಾಗುವ ಪ್ರಯೋಜನಗಳು ಯಾವುವು ? 4